ದಿನಾಂಕಃ 06.08.2019 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಭೋಧಿಸಲಾಯಿತು.

ಮುಖ್ಯ ವಿಚಾರಣೆ ಮಾನ್ಯ ಶ್ರೀ ಬಿ ಎನ್ ಡಿ ವಕೀಲರವರಿಂದಃಃ

ಸಾಕ್ಷಿಯು ತನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಹಾಜರು ಪಡಿಸಿರುತ್ತಾರೆ. ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ಸತ್ಯವಾಗಿರುತ್ತವೆ ಹಾಗೂ ಓದಿ ತಿಳಿದುಕೊಂಡು ಸಹಿಯನ್ನು ಮಾಡಿರುತ್ತಾರೆ ಎಂದು ನುಡಿದಿರುತ್ತಾರೆ.

ಪ್ರತಿವಾದಿ ನನಗೆ ದಿನಾಂಕಃ 29-11-2010 ರಂದು ಬರೆದುಕೊಟ್ಟಿರುವ ಒಂದು ನೋಂದಾಯಿತ ಸ್ವಾಧೀನ ರಹಿತ ಆಧಾರ ಪತ್ರದ ಮೂಲ ಪ್ರತಿಯನ್ನು ಹಾಜರು ಪಡಿಸಿದ್ದು ಅದನ್ನು ನಿ ಪಿ 1 ಎಂದು ಗುರ್ತಿಸಲಾಯಿತು. ನಿ ಪಿ 1 ರಲ್ಲಿರುವ ಪ್ರತಿವಾದಿಗಳ ಸಹಿಗಳನ್ನು ಸಾಕ್ಷಿ ನೋಡಿ ಗುರ್ತಿಸಿದ್ದು ಪ್ರತಿವಾದಿಗಳ ಸಹಿಯನ್ನು ನಿ ಪಿ 1(ಎ) ಯಿಂದ ನಿ ಪಿ 1(ಸಿ) ಎಂದು ಗುರ್ತಿಸಲಾಯಿತು. ದಿನಾಂಕಃ 20-04-2016 ರಂದು ನಾನು ಪ್ರತಿವಾದಿಗೆ ನಮ್ಮ ವಕೀಲರ ಮೂಲಕ ಕಳುಹಿಸಿರುವ ತಿಳುವಳಿಕೆ ಪತ್ರವನ್ನು ಹಾಜರು ಪಡಿಸಿದ್ದು ಅದನ್ನು ನಿ ಪಿ 2 ಎಂದು, ಅಂಚೆ ರಸೀದಿಯನ್ನು ಹಾಜರು ಪಡಿಸಿದ್ದು ಅದನ್ನು ನಿ ಪಿ 3 ಎಂದು, ಅಂಚೆ ಸ್ವೀಕೃತಿಯನ್ನು ಹಾಜರು ಪಡಿಸಿದ್ದು ಅದನ್ನು ನಿ ಪಿ 4 ಎಂದು ಗುರ್ತಿಸಲಾಯಿತು.

ಪಾಟೀ ಸವಾಲುಃಃ ವಕೀಲರ ಕೋರಿಕೆಯ ಮೇರೆಗೆ ಪಾಟೀ ಸವಾಲು ಮಾಡಲು ಕಾಲಾವಕಾಶ ನೀಡಲಾಯಿತು.

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಗಣಕೀಕೃತಗೊಳಿಸಲಾಯಿತು)

ಓ.ಹೇ.ಕೇ.ಸ.ಇದೆ.

ಸಿ ಜೆ ಮತ್ತು ಜೆ ಎಂ ಎಫ್ ಸಿ,
ಗುಡಿಬಂಡೆ,

Evidence End Time: 12.00 pm